**DCB – 010**

## ದ್ವಿತೀಯ ಬಿ.ಕಾಂ. ಪದವಿ ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2008

### ಅಂಚೆ ಮತ್ತು ತೆರಪಿನ ಶಿಕ್ಷಣ

### ಕನ್ನಡ ಭಾಷಾ ಪತ್ರಿಕೆ – ೨

### (ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ, ತುಘಲಕ್, ವಾಣಿಜ್ಯಕನ್ನಡ)

ಅವಧಿ : 3 ಗಂಟೆಗಳು

ಅಂಕಗಳು : 70

1. ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ.

    ೧) ಅನ್ನೆಯದಿಂ ನಡೆವವರಂ
    ನೀನ್ ನಿಯಮಿಸುವೈ ದಶಾಸ್ಯ ಪೆರನಾವಂ ನಿ
    ನ್ನನ್ ನಿಯಮಿಸುವಂ ಮುನ್ನೀರ್
    ಬೆನ್ನೀರೆನೆ ಬೆರೆಸಲಣ್ಣ ತಣ್ಣೀರೊಳವೇ

    ೨) ಮನೆಯೊಳಗೆ ಮನೆಯೊಡನೆನಿದ್ದಾನೋ ಇಲ್ಲವೋ
    ಹೊಸ್ತಿಲಲ್ಲಿ ಹುಲ್ಲುಹುಟ್ಟಿ ಮನೆಯೊಳಗೆ ರಜ ತುಂಬಿ
    ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
    ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ,
    ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲ ಸಂಗಮ ದೇವಾ 5

    ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ :
    ರಿಪು, ಮುನ್ನೀರ್, ದರ್ಪಣ, ಉದಧಿ, ರಾಜೀವ, ಕೈಯಲಗು, ಸುಲ್ತಾನ, ಗಿರಕಿ, ಟಂಕಸಾಲೆ, ಮೃಗಜಲ, ಸಿಂಗ, ಮಲರ್. 4

    ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ :
    ೧) ಅವಲೋಕಿನೀವಿದ್ಯೆ
    ೨) ಚಂಡಕರ್ಮ
    ೩) ಆಝಂ (2×2=4)

2. ನಾಲ್ಕಕ್ಕೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ :
    ೧) ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ
    ೨) ನೃಪವರ ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ
    ೩) ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ
    ೪) ಅಗಸ ತೊಳೆದಷ್ಟು ಕೊಳೆಯನ್ನು ಯಾವ ಧರ್ಮ ಗುರುವೂ ತೊಳೆದಿಲ್ಲ
    ೫) ಒಂದು ಬೇನೆಯನ್ನು ನಿಲ್ಲಿಸಲಿಕ್ಕೆ ಹೋದರೆ ಇನ್ನೊಂದು ಬೇನೆ ಬಲಿಯುತ್ತದೆ.
    ೬) ಬಯಲಾಗಿ ಹೋಗಲಿ ದಿಲ್ಲಿ! ಆಗಲೇ ನನಗೆ ಸಮಾಧಾನ. (4×3=12)

P.T.O.

3. ಅ) ಕೃಷ್ಣ ಕರ್ಣನನ್ನು ಭೇದಿಸಿದಾಗ ಕರ್ಣನಲ್ಲುಂಟಾದ ಮಾನಸಿಕ ತುಮುಲಗಳನ್ನು ತಿಳಿಸಿರಿ.

**ಅಥವಾ**

ತುಘಲಕ್ ನಾಟಕ ಇತಿಹಾಸವನ್ನು ಹೇಗೆ ಸಮಕಾಲೀನವಾಗಿಸಿದೆ ? ವಿವರಿಸಿ. **10**

ಆ) ಅಕ್ಕ ಮಹಾದೇವಿಯ ವಚನಗಳಲ್ಲಿರುವ ಸಂದೇಶ.

**ಅಥವಾ**

ನಾಟಕದಲ್ಲಿ ಅಝೀಝುನ ವ್ಯಕ್ತಿತ್ವ. **5**

## ವಾಣಿಜ್ಯ ಕನ್ನಡ

4. ಪತ್ರದ ವಿವಿಧ ಅಂಗಗಳನ್ನು ತಿಳಿಸಿ ಒಂದು ಮಾದರಿ ಪತ್ರ ರಚಿಸಿರಿ.

**ಅಥವಾ**

ಆಕ್ಷೇಪಣಾ ಪತ್ರ ಎಂದರೇನು ? ಯಾವ ಕಾರಣಗಳಿಗೆ ಬರೆಯುತ್ತಾರೆ ? ಮಾದರಿಯೊಂದಿಗೆ ತಿಳಿಸಿ. **10**

5. ಬ್ಯಾಂಕ್ ವ್ಯವಹಾರ ಪತ್ರಗಳನ್ನು ಸಂಕ್ಷೇಪವಾಗಿ ತಿಳಿಸಿರಿ.

**ಅಥವಾ**

ನೇಮಕಾತಿ ಸಂದರ್ಭದ ಪ್ರಮುಖ ಘಟ್ಟಗಳನ್ನು ಸಂಕ್ಷಿಪ್ತವಾಗಿ ತಿಳಿಸಿ. **6**

6. ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ :

೧) ವರದಿ

೨) ವಾರ್ಷಿಕ ಸಭೆ

೩) ಖರೀದಿ ಪತ್ರ **(2×2=4)**

7. ಅ) ಈ ಕೆಳಗಿನ ಒಂದು ವಿಷಯವನ್ನು ಕುರಿತು ಎರಡು ಪುಟಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

೧) ರೈತರ ಸರಣಿ ಆತ್ಮಹತ್ಯೆ    ೨) ಅಕಾಲಿಕ ಚುನಾವಣೆ **6**

ಆ) ಈ ಕೆಳಗಿನವುಗಳಲ್ಲಿ ಒಂದಕ್ಕೆ ವಿವರಣೆ ಕೊಡಿ.

೧) ಮಾಹಿತಿ ಬಯಸುವ ಪತ್ರ

೨) ವಾಣಿಜ್ಯ ಕನ್ನಡ **4**